KACM710004772021

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

ಉಪಸ್ಥಿತರು
ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್., ಎಲ್ಎಲ್‌ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕ ಃ **7** ನೇ ಏಪ್ರಿಲ್ **2026**

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 331/2021

ಫಿರ್ಯಾದಿ ಃ ರಾಜ್ಯದ ಪರವಾಗಿ ಲಿಂಗದಹಳ್ಳಿ ಪೊಲೀಸರು

**(**ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು**)**

**-**ವಿರುದ್ಧ**-**

ಆರೋಪಿ/ತರು ಃ

ಅರುಣ್ ರೋಡ್ರಿಗಸ್ ಬಿನ್ ಸಿರಿಲ್ ರೋಡ್ರಿಗಸ್, 38 ವರ್ಷ, ಚಾಲಕ ವೃತ್ತಿ, ವಾಸಃ ಮಾವಿನಕೆರೆ ಕಾಲೋನಿ, ಭದ್ರಾವತಿ, ಶಿವಮೊಗ್ಗ ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಕೆ.ಪ್ರವೀಶ್, ನ್ಯಾಯವಾದಿಗಳು.)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 11.02.2020 |
| 2 | ಅಪರಾಧ ವರದಿ ಮಾಡಿದ ದಿನಾಂಕ | 12.02.2020 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | -- |
| 4 | ಫಿರ್ಯಾದಿಯ ಹೆಸರು | ನಾಗಭೂಷಣ |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 01.04.2025 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 09.03.2026 |

KACM710004772021

| | | |
|---|---|---|
| 7 | ಆರೋಪಿಸಲಾದ ಅಪರಾಧಗಳು | ಭಾ.ದ.ಸಂ.ಕಲಂ 279, 304(ಎ), ಮೋಟಾರು ವಾಹನ ಕಾಯ್ದೆ ಕಲಂ 187 |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿ ನಿರಪರಾಧಿ |

****

## <u>ತೀರ್ಪು</u>

ಪೊಲೀಸ್ ವೃತ್ತ ನಿರೀಕ್ಷಕರು, ತರೀಕೆರೆ ಗ್ರಾಮಾಂತರ ವೃತ್ತ, ಚಿಕ್ಕಮಗಳೂರು ಜಿಲ್ಲೆ ಇವರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279 ಹಾಗೂ 304(ಎ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

2. <u>ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-</u>

ದಿನಾಂಕ 11.02.2020 ರಂದು ರಾತ್ರಿ 08.00 ಗಂಟೆ ಸಮಯದಲ್ಲಿ ಚಾಸಾ-1 ಮತ್ತು ಜುಂಜಾನಾಯ್ಕ ರವರು ತರೀಕೆರೆಯಲ್ಲಿ ಕೆಲಸ ಮುಗಿಸಿಕೊಂಡು ವಾಪಸ್ಸು ತನ್ನ ಊರಿಗೆ ಚಾಸಾ-1 ರವರ ಬಾಬ್ತು ಕೆಎ-66/ಜೆ-5713 ರ ಮೋಟಾರ್ ಸೈಕಲ್ ನಲ್ಲಿ ರಾತ್ರಿ 08.45 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಠಾಣಾ ವ್ಯಾಪ್ತಿಯ ಕೆಂಚಾಪುರ ಗೇಟ್ ಹತ್ತಿರ ಹೋಗುತ್ತಿರುವಾಗ ಆರೋಪಿಯು ಚಾಸಾ-7 ತಿಮ್ಮಪ್ಪರವರನ್ನು ಕೆಎ:52/7841 ರ ಲಾರಿಯಲ್ಲಿ ಕೂರಿಸಿಕೊಂಡು ಲಿಂಗದಹಳ್ಳಿ ಕಡೆಯಿಂದ ತರೀಕೆರೆ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಜುಂಜಾನಾಯ್ಕ ರವರು ಚಾಲನೆ ಮಾಡಿಕೊಂಡು ಬರುತ್ತಿದ್ದ ಸದರಿ ಬೈಕ್ ಗೆ ಡಿಕ್ಕಿ ಹೊಡೆಸಿ ಪಡಿಸಿದ ಪರಿಣಾಮ ಜುಂಜಾನಾಯ್ಕ ರವರು ಸದರಿ ಬೈಕ್ ನಿಂದ ಕೆಳಗೆ ಬಿದ್ದ ಪರಿಣಾಮ ಅವರ ತಲೆಯ ಹಿಂದಿನ ಬಲಭಾಗಕ್ಕೆ ಪೆಟ್ಟು ಬಿದ್ದು ತೀವ್ರ ಸ್ವರೂಪದ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಸದರಿ ಅಪಘಾತ ಪಡಿಸಿದ

Visit **ecourts.gov.in** for updates or download mobile app "**eCourts Services**" from Android or iOS

ನಂತರ ಆರೋಪಿಯು ಸದರಿ ಲಾರಿಯನ್ನು ಸ್ಥಳದಲ್ಲಿ ನಿಲ್ಲಿಸದೆ, ಗಾಯಾಳುವಿಗೆ ಚಿಕಿತ್ಸೆ ಕೊಡಿಸದೆ ಹಾಗೂ ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದೆ ಚಾಲನೆ ಮಾಡಿಕೊಂಡು ಹೋಗಿರುತ್ತಾರೆ. ಆದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿಯು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿಯು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿಗೆ ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ಭಾರತೀಯ ದಂಡ ಪಕ್ರಿಯಾ ಸಂಹಿತೆ ಕಲಂ 207 ರ ಅನುಸಾರ ಒದಗಿಸಲಾಗಿರುತ್ತದೆ. ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279 ಹಾಗೂ 304(ಎ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಅಪಾದನೆಯನ್ನು ರಚಿಸಲಾಯಿತು. ಆರೋಪಿಯು ಸದರಿ ಅಪಾದನೆಯನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾರೆ.

4. ಅಭಿಯೋಜನೆಯು ಸಾಕ್ಷಿದಾರರ ಪಟ್ಟಿಯಲ್ಲಿ ತೋರಿಸಿರುವ 15 ಸಾಕ್ಷಿದಾರರ ಪೈಕಿ ಅಸಾ-1 ರಿಂದ 9 ರವರ ಸಾಕ್ಷ್ಯ ಮಾಡಿಸಿರುತ್ತಾರೆ ಹಾಗೂ 21 ದಾಖಲೆಗಳನ್ನು ಹಾಜರುಪಡಿಸಿ ನಿಪಿ-1 ರಿಂದ 21 ಎಂದು ಮತ್ತು ಮುದ್ದೆಮಾಲು-1 ನ್ನು ಗುರ್ತಿಸಿಕೊಂಡಿರುತ್ತಾರೆ.

5. ಅಭಿಯೋಜನೆ ಪರ ಸಾಕ್ಷಿದಾರರ ವಿಚಾರಣೆ ಮುಕ್ತಾಯಗೊಂಡ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು. ಆರೋಪಿಯು ತನ್ನ ವಿರುದ್ಧದ ಹೇಳಿಕೆಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ಅವರ ಪರ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ

Visit **ecourts.gov.in** for updates or download mobile app "**eCourts Services**" from Android or iOS

KACM710004772021

ಒಳಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ದಾಖಲಾತಿಗಳನ್ನು ಗುರ್ತಿಸಿಕೊಂಡಿರುವುದಿಲ್ಲ.

6. ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ನ್ನು ಪಾಲನೆ ಮಾಡಿರುತ್ತಾನೆ.

7. ಆರೋಪಿಯ ಪರ ಹಾಗೂ ಅಭಿಯೋಜಕರ ಪರ ವಾದ ಪ್ರತಿವಾದಗಳನ್ನು ಆಲಿಸಲಾಯಿತು.

8. ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತದೆ ಃ

1) ದಿನಾಂಕ 11.02.2020 ರಂದು ರಾತ್ರಿ 08.45 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಠಾಣಾ ವ್ಯಾಪ್ತಿಯ ಕೆಂಚಾಪುರ ಗೇಟ್ ಹತ್ತಿರ ಜುಂಜಾನಾಯ್ಕ ರವರು ಚಾಸಾ-1 ರವರ ಬಾಬ್ತು ಕೆಎ-66/ಜೆ-5713 ರ ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿರುವಾಗ ಆರೋಪಿಯು ಚಾಸಾ-7 ತಿಮ್ಮಪ್ಪರವರನ್ನು ಕೆಎಃ52/7841 ರ ಲಾರಿಯಲ್ಲಿ ಕೂರಿಸಿಕೊಂಡು ಲಿಂಗದಹಳ್ಳಿ ಕಡೆಯಿಂದ ತರೀಕೆರೆ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಜುಂಜಾನಾಯ್ಕ ರವರು ಚಾಲನೆ ಮಾಡಿಕೊಂಡು ಬರುತ್ತಿದ್ದ ಸದರಿ ಬೈಕ್ ಗೆ ಡಿಕ್ಕಿ ಹೊಡೆಸಿ ಪಡಿಸಿದ್ದು, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

2) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿಯು ಚಾಸಾ-7 ತಿಮ್ಮಪ್ಪರವರನ್ನು ಕೆಎಃ52/7841 ರ ಲಾರಿಯಲ್ಲಿ ಕೂರಿಸಿಕೊಂಡು ಲಿಂಗದಹಳ್ಳಿ ಕಡೆಯಿಂದ ತರೀಕೆರೆ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಜುಂಜಾನಾಯ್ಕ ರವರು

KACM710004772021

ಚಾಲನೆ ಮಾಡಿಕೊಂಡು ಬರುತ್ತಿದ್ದ ಸದರಿ ಬೈಕ್ ಗೆ ಡಿಕ್ಕಿ ಹೊಡೆಸಿ ಪಡಿಸಿದ ಪರಿಣಾಮ ಜುಂಜಾನಾಯ್ಕ ರವರು ಸದರಿ ಬೈಕ್ ನಿಂದ ಕೆಳಗೆ ಬಿದ್ದ ಪರಿಣಾಮ ಅವರ ತಲೆಯ ಹಿಂದಿನ ಬಲಭಾಗಕ್ಕೆ ಪೆಟ್ಟು ಬಿದ್ದು ತೀವ್ರ ಸ್ವರೂಪದ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

3) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿಯು ಕೆಎಃ52/7841 ರ ಲಾರಿಯನ್ನು ದುಡುಕು ಹಾಗೂ ನಿರ್ಲಕ್ಷತನದಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಮೇಲ್ಕಂಡಂತೆ ಅಪಘಾತಪಡಿಸಿ ಸದರಿ ವಾಹನವನ್ನು ಸ್ಥಳದಲ್ಲಿ ನಿಲ್ಲಿಸದೆ ಹಾಗೂ ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದೆ ಹೋಗಿದ್ದು, ಆದ್ದರಿಂದ ಆರೋಪಿಯು ಮೋಟಾರು ವಾಹನ ಕಾಯ್ದೆ ಕಲಂ 187 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

4) ಹಾಗಿದ್ದರೆ ಯಾವ ಆಜ್ಞೆ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತವೆ ಃ

ಅಂಶ-1 ಃ ನಕಾರಾತ್ಮಕವಾಗಿ,

ಅಂಶ-2 ಃ ನಕಾರಾತ್ಮಕವಾಗಿ,

ಅಂಶ-3 ಃ ನಕಾರಾತ್ಮಕವಾಗಿ,

ಅಂಶ-4 ಃ ಅಂತಿಮ ಆದೇಶದಂತೆ**,**

-ಃ ಕಾ ರ ಣ ಗ ಳು ಃ-

10. ಅಂಶ**-1** ರಿಂದ **3** ಃ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಹಾಗೂ ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದ ಅಂಶಗಳ

Visit **ecourts.gov.in** for updates or download mobile app "**eCourts Services**" from Android or iOS

ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಇವುಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ. ಆರೋಪಿಯ ವಿರುದ್ಧ ಅಭಿಯೋಜನೆಯು ಮಾಡಿರುವ ಆರೋಪಗಳನ್ನು ಸಾಬೀತುಪಡಿಸಲು ಪಿರ್ಯಾದುದಾರರು ಸಾಕ್ಷಿದಾರರಾದ ಚಾಸಾ-1/ಅಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯನ್ನು ತಾನು ನೋಡಿರುವುದಿಲ್ಲ, ಈಗ್ಗೆ ಸುಮಾರು 4-5 ವರ್ಷಗಳ ಹಿಂದೆ ತಾನು ತರೀಕೆರೆಯಿಂದ ಲಿಂಗದಹಳ್ಳಿ ಗ್ರಾಮಕ್ಕೆ ಸಂಜೆ 08.30 ಗಂಟೆ ಸಮಯದಲ್ಲಿ ತನ್ನ ಬೈಕಿನಲ್ಲಿ ಹೋಗುತ್ತಿದ್ದಾಗ ಕೆಂಚಾಪುರದ ಸ್ವಲ್ಪ ದೂರದಲ್ಲಿ ಶಿವು ಎಂಬುವವರು ಅವರ ಬೈಕಿನಲ್ಲಿ ಕೆಳಗೆ ಬಿದಿದ್ದರು, ಅಪಘಾತವನ್ನು ತಾನು ಕಣ್ಣಾರೆ ನೋಡಿರುವುದಿಲ್ಲ, ತಾನು ಹೋಗಿ ಶಿವುರವರನ್ನು ತರೀಕೆರೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು, ವೈದ್ಯರು ಪರಿಶೀಲಿಸಿ ಶಿವುರವರು ಮೃತಪಟ್ಟಿರುತ್ತಾರೆಂದು ತಿಳಿಸಿದರು, ಅಪಘಾತ ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅಸಾ-1 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಲ್ಲಗಳೆದು ತಾನು ಅಪಘಾತ ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲ, ನಿಪಿ-1 ದೂರು ಹಾಗೂ ನಿಪಿ-2 ಸ್ಥಳ ಮಹಜರು ಮತ್ತು ನಿಪಿ-3 ಅಮಾನತ್ತು ಮಹಜರಿಗೆ ತಾನು ಸಹಿ ಮಾಡಿದ್ದು ಅದರಲ್ಲಿ ಬರೆದ ವಿಚಾರಗಳು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

11. ನಿಪಿ-2 ರ ಸ್ಥಳ ಮಹಜರು ಹಾಗೂ ನಿಪಿ-3 ರ ವಾಹನ ಅಮಾನತ್ತು ಮಹಜರು ಸಾಕ್ಷಿದಾರರಾದ ಚಾಸಾ-9/ಅಸಾ-2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ನಾಲ್ಕು ವರ್ಷಗಳ ಹಿಂದೆ ತಾನು ಕೆಂಚಾಪುರದ ಹತ್ತಿರ 11.00 ಗಂಟೆ ಸಮಯದಲ್ಲಿ ರಸ್ತೆಯಲ್ಲಿ ಬರುತ್ತಿರುವಾಗ ಅಪಘಾತದ ವಿಚಾರವಾಗಿ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿರುವುದಿಲ್ಲ, ನಿಪಿ-3 ದಾಖಲಾತಿಗೆ ತಾನು

KACM710004772021

ಕೆಂಚಾಪುರದಲ್ಲಿ ಸಹಿ ಮಾಡಿದ್ದು, ಅದರಲ್ಲಿ ಬರೆದಿರುವ ವಿಚಾರ ತನಗೆ ತಿಳಿದಿರುವುದಿಲ್ಲ ಹಾಗೂ ತನ್ನ ಸಮಕ್ಷಮದಲ್ಲಿ ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-2 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-2 ರವರು ತಮ್ಮ ಪಾಟೀ ಸವಾಲಿನಲ್ಲಿ ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಲ್ಲಗಳೆದು ತಾನು ನಿಪಿ-2 ಸ್ಥಳ ಮಹಜರಿಗೆ ತಾನು ಸಹಿ ಮಾಡಿದ್ದು ಅದರಲ್ಲಿ ಬರೆದ ವಿಚಾರಗಳು ತನಗೆ ಗೊತ್ತಿಲ್ಲ ಹಾಗೂ ತಾನು ನಿಪಿ-3 ರಂತೆ ಪೊಲೀಸರು ಜರುಗಿಸಿದ ಮಹಜರಿಗೆ ತಾನು ಸಹಿ ಮಾಡಿಲ್ಲ, ತನ್ನ ಸಮಕ್ಷಮ ಬೈಕನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಛಾಯಚಿತ್ರ ತೆಗೆದಿದ್ದು ಅದರಲ್ಲಿ ಬರೆದ ವಿಚಾರ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಂತರ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಮಹಜರಿನಲ್ಲಿ ಬರೆದಿರುವ ವಿಚಾರ ತನಗೆ ತಿಳಿದಿರುವುದಿಲ್ಲ, ಪೊಲೀಸರ ಒತ್ತಾಯದ ಮೇರೆಗೆ ಸಹಿ ಮಾಡಿದ್ದು, ಛಾಯಚಿತ್ರದಲ್ಲಿ ಪೊಲೀಸರ ಒತ್ತಾಯದ ಮೇರೆಗೆ ನಿಂತಿರುತ್ತೇನೆ, ತನಗೆ ಯಾವುದೇ ವಿಚಾರ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ.

12. ನಿಪಿ-10 ರ ವಾಹನ ಅಮಾನತ್ತು ಮಹಜರು ಸಾಕ್ಷಿದಾರರಾದ ಚಾಸಾ-10/ಅಸಾ-3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು 4-5 ವರ್ಷಗಳ ಹಿಂದೆ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ರಸ್ತೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಮದ್ಯದ ವಿಚಾರವಾಗಿ ಮಾಡಿದ ಮಹಜರಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿರುವುದಿಲ್ಲ, ತನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-3 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು

Visit **ecourts.gov.in** for updates or download mobile app "**eCourts Services**" from Android or iOS

ಮಾಡಿದ್ದು, ಅಸಾ-3 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 23.03.2020 ರಂದು ಲಿಂಗದಹಳ್ಳಿ ಪೊಲೀಸ್ ಠಾಣಾ ಆವರಣದಲ್ಲಿ ಮಧ್ಯಾಹ್ನ 01.15 ರಿಂದ 02.15 ರವರೆಗೆ ಅಪಘಾತವಾದ ವಿಚಾರವಾಗಿ ವಾಹನ ಅಮಾನತ್ತು ಮಹಜರು ಜರುಗಿಸಿದ್ದು, ಸದರಿ ಮಹಜರಿಗೆ ತಾನು ಸಹಿ ಹಾಕಿರುತ್ತೇನೆ ಎಂದರೆ ಸರಿ, ತಮ್ಮ ಸಮಕ್ಷಮ ಕೆಎ52/7841 ಲಾರಿಯನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿ, ತಮ್ಮ ಜೊತೆ ರೇಖಾನಾಯ್ಕರವರು ಸಹಿ ಮಾಡಿರುತ್ತಾರೆಂದರೆ ತನಗೆ ಗೊತ್ತಿಲ್ಲ, ಮಹಜರಿನಲ್ಲಿ ಬರೆದ ವಿಚಾರ ತನಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. ನಂತರ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಮಹಜರಿನಲ್ಲಿ ಬರೆದಿರುವ ವಿಚಾರ ತನಗೆ ತಿಳಿದಿರುವುದಿಲ್ಲ, ಪೊಲೀಸರ ಒತ್ತಾಯದ ಮೇರೆಗೆ ಸಹಿ ಮಾಡಿದ್ದು, ನಿಪಿ-10 ರ ಛಾಯಚಿತ್ರದಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ತೆಗೆಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ.

13. ಅಪಘಾತಕ್ಕೀಡಾದ ವಾಹನಗಳನ್ನು ತಪಾಸಣೆ ಮಾಡಿ ಐ.ಎಂ.ವಿ. ವರದಿ ನೀಡಿದ ಬಗ್ಗೆ ಸಾಕ್ಷಿದಾರರಾದ ಚಾಸಾ-9/ಅಸಾ-4 ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ದಿನಾಂಕ 24.02.2020 ರಂದು ಸಂಜೆ 04.00 ಗಂಟೆಗೆ ಲಿಂಗದಹಳ್ಳಿ ಠಾಣಾ ಆವರಣಕ್ಕೆ ಭೇಟಿ ಕೊಟ್ಟು ಅಲ್ಲಿದ್ದ ಅಪಘಾತಕ್ಕೆ ಒಳಗಾದ ವಾಹನವಾದ ಕೆಎ66/ಜೆ-5713 ವಾಹನವನ್ನು ಪರೀಕ್ಷೆ ಮಾಡಿದಾಗ ತಪಾಸಣೆಗೆ ಒಳಪಡಿಸಿದಾಗ ಕಂಡು ಬಂದ ನ್ಯೂನತೆಗಳೇನೆಂದರೆ ಅದರ front mud guard sheared off and crushed, front head light smashed, front both side indicators smashed, front wind shield mask smashed, steering handle both side pressed inward, front both side shock absorbers bend, left side gear lever at front end bend, front crash guard at left side pressed inward ಮತ್ತು ಉಳಿದ ಭಾಗಗಳು ಸುಸ್ಥಿತಿಯಲ್ಲಿದ್ದವು,

ತಾನು ಸದರಿ ವಾಹನವನ್ನು ನಿಂತಲ್ಲೇ ಪರೀಕ್ಷೆ ಮಾಡಿದಾಗ ಸದರಿ ವಾಹನದ ಬ್ರೇಕ್ ವ್ಯವಸ್ಥೆ ಸರಿಯಾಗಿದ್ದು, ಸದರಿ ಅಪಘಾತವು ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂಬುದಾಗಿ ನಿಪಿ-12 ರಂತೆ ವರದಿಯನ್ನು ಸಲ್ಲಿರುತ್ತೇನೆ ಹಾಗೂ ಕೆಎ52/7841 ವಾಹನವನ್ನು ಪರೀಕ್ಷಿಸಿದಾಗ ಕಂಡು ಬಂದ ನ್ಯೂನತೆಗಳೇನೆಂದರೆ ಅದರ right side foot rest of driver scratched ಮತ್ತು ಉಳಿದ ಭಾಗಗಳು ಸುಸ್ಥಿತಿಯಲ್ಲಿದ್ದವು, ತಾನು ಸದರಿ ವಾಹನವನ್ನು ನಿಂತಲ್ಲೇ ಪರೀಕ್ಷೆ ಮಾಡಿದಾಗ ಸದರಿ ವಾಹನದ ಬ್ರೇಕ್ ವ್ಯವಸ್ಥೆ ಸರಿಯಾಗಿದ್ದು, ಸದರಿ ಅಪಘಾತವು ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂಬುದಾಗಿ ವರದಿಯನ್ನು ನಿಪಿ-13 ರಂತೆ ಸಲ್ಲಿರುತ್ತೇನೆ ಎಂದು ನುಡಿದಿರುತ್ತಾರೆ.

14. ಪ್ರಸ್ತುತ ಪ್ರಕರಣವನ್ನು ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿದ ಸಾಕ್ಷಿದಾರರಾದ ಚಾಸಾ-13/ಅಸಾ-5 ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ದಿನಾಂಕ 12.02.2020 ರಂದು ಬೆಳಿಗ್ಗೆ 09.00 ಗಂಟೆಗೆ ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 18/2020 ರಲ್ಲಿ ಐಪಿಸಿ ಕಲಂ 279, 304(ಎ) ಮತ್ತು ಐ ಎಂ ವಿ ಆಕ್ಟ್ ಕಲಂ 187 ಅಡಿಯಲ್ಲಿ ಕೇಸನ್ನು ದಾಖಲಿಸಿ ಆರೋಪಿಯ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ.

15. ಪ್ರಕರಣದ ತನಿಖೆಯನ್ನು ಕೈಗೊಂಡು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ತನಿಖಾಧಿಕಾರಿಗಳಾದ ಚಾಸಾ-15/ಅಸಾ-6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 12.02.2020 ರಂದು ಚಾಸಾ-13 ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ, ಅದೇ ದಿನ ಚಾಸಾ-14 ರವರಿಗೆ ಶವಪಂಚನಾಮೆ ಜರುಗಿಸಲು ಆದೇಶ ನೀಡಿದ್ದು, ನಂತರ ಅದೇ ದಿನ ಚಾಸಾ-14 ರವರು ಶವಪಂಚಾನಾಮೆ ಜರುಗಿಸಿ,

Visit **ecourts.gov.in** for updates or download mobile app "**eCourts Services**" from Android or iOS

ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು ತನ್ನ ಮುಂದೆ ಹಾಜರುಪಡಿಸಿರುತ್ತಾರೆ, ಅದೇ ದಿನ ಕೃತ್ಯ ನಡೆದ ಸ್ಥಳದಲ್ಲಿ ರಂಗಪ್ಪನವರ ಫಾರಂ ಹತ್ತಿರ ಪಂಚರಾದ ಚಾಸಾ-8 ಮತ್ತು 9 ರವರ ಸಮಕ್ಷಮ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಮಹಜರು ಕ್ರಮವನ್ನು ಜರುಗಿಸಿ, ಲೆಪ್ಪದಿಂದ ಕೂಡಿದ 5 ನೀಲಿ ಬಣ್ಣದ ಗಾಜಿನ ಚೂರುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ, ನಂತರ ಪೋಟೋವನ್ನು ತೆಗೆಸಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇವೆ, ಅಮಾನತ್ತು ಪಡಿಸಿಕೊಂಡ ಮುದ್ದೆಮಾಲನ್ನು ಮಾಲುಪಟ್ಟಿ ಸಂಖ್ಯೆ 13/2020 ರಲ್ಲಿ ನಮೂದು ಮಾಡಿ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ, ನಂತರ ಅದೇ ದಿನ ಲಿಂಗದಹಳ್ಳಿ ಪೊಲೀಸ್ ಠಾಣಾ ಆವರಣಕ್ಕೆ ಹೋಗಿ ಪಂಚರಾದ ಚಾಸಾ-8 ಮತ್ತು 9 ರವರ ಸಮಕ್ಷಮ ವಾಹನ ಅಮಾನತ್ತು ಮಹಜರು ಕ್ರಮವನ್ನು ಜರುಗಿಸಿ, ಆ ಸಮಯದಲ್ಲಿ ಅಪಘಾತಕ್ಕೆ ಒಳಗಾದ ಟಿ ವಿ ಎಸ್ ರಾಂಡಮ್ ಬೈಕನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ, ಆ ಸಮಯದಲ್ಲಿ ಪೋಟೋ ತೆಗೆಸಿರುತ್ತೇನೆ, ಅದೇ ದಿನ ಸಾಕ್ಷಿದಾರರಾದ ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ದಿನಾಂಕ 17.02.2020 ರಂದು ಮೃತ ಜುಂಜಾನಾಯ್ಕರವರ ಪಿ.ಎಂ. ವರದಿಯನ್ನು ತರೀಕೆರೆ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿನಾಂಕ 24.02.2020 ರಂದು ಅಪಘಾತಕ್ಕೆ ಒಳಗಾದ ಟಿವಿಎಸ್ ಬೈಕನ್ನು ಐಎಂವಿ ತಪಾಸಣೆಗೆ ಒಳಪಡಿಸಿರುತ್ತೇನೆ, ದಿನಾಂಕ 28.02.2020 ರಂದು ಚಾಸಾ-11 ರವರಿಂದ ಐಎಂವಿ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿನಾಂಕ 02.03.2020 ರಂದು ಅಪಘಾತಕ್ಕೆ ಒಳಗಾದ ಟಿವಿಎಸ್ ಬೈಕನ್ನು ಆರ್.ಸಿ. ಮಾಲೀಕರಾದ ಕುಮಾರ್ ರವರಿಗೆ ಇಂಡಿಮಿನಿಟಿ ಬಾಂಡ್ ಪಡೆದು ಬಿಟ್ಟುಕೊಟ್ಟಿರುತ್ತೇನೆ, ದಿನಾಂಕ 23.03.2020 ರಂದು ಅಪಘಾತವುಂಟು ಮಾಡಿದ ಲಾರಿ ನಂ.ಕೆಎಃ52/7841 ನ್ನು ಪಂಚರಾದ ಚಾಸಾ-10 ಮತ್ತು 5 ರವರ ಸಮಕ್ಷಮ ವಾಹನ ಅಮಾನತ್ತು ಮಹಜರು ಜರುಗಿಸಿ ಅಮಾನತ್ತು ಪಡಿಸಿಕೊಂಡು ಛಾಯಚಿತ್ರವನ್ನು

ತೆಗೆಸಿರುತ್ತೇನೆ, ನಂತರ ಆರೋಪಿಯಾದ ಲಾರಿಯ ಮಾಲೀಕ ಅರುಣ್ ರೋಡಿಗ್ರುಸ್ ರವರಿಗೆ ಐಎಂವಿ ಕಲಂ 133 ರಡಿ ನೋಟೀಸ್ ನೀಡಿರುತ್ತೇನೆ, ಅದೇ ದಿನ ಅವರಿಂದ ಉತ್ತರವನ್ನು ಸ್ವೀಕರಿಸಿಕೊಂಡಿರುತ್ತೇನೆ, ಆರೋಪಿಗೆ ದಸ್ತಗಿರಿ ಕ್ರಮ ಜರುಗಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಲಾರಿ ಮಾಲೀಕರಾದ ಆರೋಪಿಯಿಂದ ಲಾರಿಯ ದಾಖಲಾತಿಯನ್ನು ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ, ಅದೇ ದಿನ ಲಾರಿಯ ತಪಾಸಣೆಗಾಗಿ ಚಾಸಾ-11 ರವರಿಗೆ ಮನವಿ ಪತ್ರ ನೀಡಿರುತ್ತೇನೆ, ದಿನಾಂಕ 24.03.2020 ರಂದು ಪಿರ್ಯಾದಿ ಚಾಸಾ-1 ಮತ್ತು ಚಾಸಾ-4, 5 ರವರ ಮುಂದುವರಿದ ಹೇಳಿಕೆಯನ್ನುಪಡೆದುಕೊಂಡಿರುತ್ತೇನೆ, ದಿನಾಂಕ 27.04.2020 ರಂದು ಆರ್.ಸಿ. ಮಾಲೀಕ ಆರೋಪಿರವರಿಂದ ಇಂಡಿಮಿನಿಟಿ ಬಾಂಡ್ ಪಡೆದು ಲಾರಿಯನ್ನು ಅವರ ವಶಕ್ಕೆ ನೀಡಿರುತ್ತೇನೆ, ದಿನಾಂಕ 24.05.2020 ರಂದು ಚಾಸಾ-11 ರವರಿಂದ ಲಾರಿಯ ಸಂಬಂಧ ಐಎಂವಿ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಅದೇ ದಿನ ಸಿಬ್ಬಂದಿಯಾದ ಕಿರಣ್‌ಕುಮಾರ್ ರವರಿಂದ ಛಾಯಚಿತ್ರವನ್ನು ಸಿಡಿಗೆ ವರ್ಗಾಯಿಸಿರುವ ಬಗ್ಗೆ 65(ಬಿ) ಸರ್ಟಿಫಿಕೇಟ್ ಪಡೆದುಕೊಂಡಿರುತ್ತೇನೆ, ನಂತರ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ.

16. ನಿಪಿ-10 ರ ವಾಹನ ಅಮಾನತ್ತು ಮಹಜರು ಸಾಕ್ಷಿದಾರರಾದ ಚಾಸಾ-5/ಅಸಾ-7 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ನಾಲ್ಕು ವರ್ಷಗಳ ಹಿಂದೆ ತಾನು ಕೆಂಚಾಪುರ ಗ್ರಾಮದಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿರುವುದಿಲ್ಲ, ತನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ, ನಂತರ ತಾನು ತರೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

ಅಸಾ-7 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-7 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 23.03.2020 ರಂದು ಮಧ್ಯಾಹ್ನ 03.15 ರಿಂದ 04.15 ರವರೆಗೆ ತರೀಕೆರೆ ಪೊಲೀಸ್ ಠಾಣಾ ಆವರಣದಲ್ಲಿ ಅಪಘಾತವುಂಟು ಮಾಡಿದ ಲಾರಿಯನ್ನು ಪೊಲೀಸರು ಅಮಾನತ್ತು ಮಹಜರು ಕ್ರಮ ಜರುಗಿಸಿದ್ದು, ಸದರಿ ಮಹಜರಿಗೆ ಸಹಿ ಮಾಡಿದ್ದು, ಆದರೆ ವಿಚಾರ ತಿಳಿದಿರುವುದಿಲ್ಲ, ಆ ಸಮಯದಲ್ಲಿ ತಮ್ಮ ಸಮಕ್ಷಮದಲ್ಲಿ ಕೆಎ:52/7841 ಹಳದಿ ಮತ್ತು ನೀಲಿ ಬಣ್ಣದ ಲಾರಿಯನ್ನು ಅಪಘಾತದ ವಿಚಾರವಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ತಾನು ಸಹಿ ಹಾಕಿದ್ದು, ಛಾಯಚಿತ್ರವನ್ನು ತೆಗೆಸಿರುತ್ತಾರೆ, ಅಪಘಾತದ ವಿಚಾರವಾಗಿ ಎಂದು ತನಗೆ ತಿಳಿಸಿರುತ್ತಾರೆಂದು ನುಡಿದಿರುತ್ತಾರೆ.

17. ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-7/ಅಸಾ-8 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ 09.15 ಗಂಟೆ ಸಮಯದಲ್ಲಿ ತಾನು ಲಿಂಗದಹಳ್ಳಿಯಿಂದ ಕೆಂಚಾಪುರ ಗ್ರಾಮಕ್ಕೆ ಲಾರಿಯಲ್ಲಿ ಬರುತ್ತಿರುವಾಗ ಎದುರುಗಡೆ ಒಂದು ಬೈಕ್ ಗೆ ಲಾರಿ ಅಪಘಾತಪಡಿಸಿರುತ್ತದೆ, ಬೈಕಿನ ಚಾಲಕ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ, ಘಟನೆಯನ್ನು ತಾನು ಕಣ್ಣಾರೆ ಕಂಡಿರುವುದಿಲ್ಲ, ಆನಂತರ ವಿಚಾರ ತಿಳಿದುಬಂದಿರುತ್ತದೆ ಎಂದು ನುಡಿದಿರುತ್ತಾರೆ. ಅಸಾ-8 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-8 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 11.02.2020 ರಂದು ತಾನು ಕೆಂಚಾಪುರಕ್ಕೆ ಹೋಗಲು ಬಸ್ ನಿಲ್ದಾಣದಲ್ಲಿ ಕಾಯುತ್ತಿದ್ದು, ಬಸ್ಸು ಬರದೇ ಇರುವ ಕಾರಣ ತಾನು ಲಾರಿಯನ್ನು ಹತ್ತಿರುತ್ತೇನೆಂದರೆ ಸರಿ, ಲಾರಿಯ ಚಾಲಕ ಅಮೃತ್ ಮಹಲ್ ನ ಹತ್ತಿರ ಲಾರಿ ನಂ.ಕೆಎ:52/7841 ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ

Visit **ecourts.gov.in** for updates or download mobile app "**eCourts Services**" from Android or iOS

ರಂಗಪ್ಪನವರ ಫಾರಂ ಹತ್ತಿರ ಹೋಗುತ್ತಿರುವಾಗ ಕೆಎ66/ಜಿ-5713 ರ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಬೈಕ್ ಚಾಲಕ ಬೈಕಿನಿಂದ ಕೆಳಗೆ ಬಿದ್ದು ತಲೆಗೆ, ಮೈಕೈಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿರುತ್ತಾರೆಂದರೆ ಸರಿ, ಲಾರಿ ಚಾಲಕ ಲಾರಿಯನ್ನು ನಿಲ್ಲಿಸು ಎಂದು ಹೇಳಿದರೂ ನಿಲ್ಲಿಸಲಿಲ್ಲ ಎಂದರೆ ಸರಿ, ಸದರಿ ವಿಚಾರವಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿ ಎಂದು ನುಡಿದಿರುತ್ತಾರೆ. ನಂತರ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಅಪಘಾತ ಹೇಗೆ ಆಯಿತು ಎಂದು ತನಗೆ ತಿಳಿದಿರುವುದಿಲ್ಲ, ಅಪಘಾತವನ್ನು ತಾನು ತನ್ನ ಕಣ್ಣಾರೆ ಕಂಡಿರುವುದಿಲ್ಲ ಎಂದು ನುಡಿದಿರುತ್ತಾರೆ.

18. ನಿಪಿ-2 ರ ಸ್ಥಳ ಮಹಜರು ಸಾಕ್ಷಿದಾರರಾದ ಚಾಸಾ-8/ಅಸಾ-9 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಕೆಂಚಾಪುರದ ಗೇಟ್ ಹತ್ತಿರ ಅಪಘಾತದ ವಿಚಾರವಾಗಿ ಪೊಲೀಸರು ಮಾಡಿದ ಮಹಜರಿಗೆ ತಾನು ಸಹಿ ಮಾಡಿದ್ದು, ಮಹಜರಿನಲ್ಲಿ ಬರೆದಿರುವ ವಿಚಾರ ತನಗೆ ತಿಳಿದಿರುತ್ತದೆ, ಲಿಂಗದಹಳ್ಳಿ ಪೊಲೀಸ್ ಠಾಣಾ ಆವರಣದಲ್ಲಿ ಇನ್ನೊಂದು ವಾಹನ ಅಮಾನತ್ತು ಮಹಜರಿಗೆ ಸಹಿ ಮಾಡಿರುತ್ತೇನೆ, ತನ್ನ ಸಮಕ್ಷಮ ಟಿ ವಿ ಎಸ್ ಬೈಕ್ ನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಮಹಜರಿಗೆ ಸಹಿ ಮಾಡಿರುತ್ತೇನೆ, ಅದರಲ್ಲಿ ಬರೆದ ವಿಚಾರ ತನಗೆ ತಿಳಿದಿರುವುದಿಲ್ಲ, ಪೊಲೀಸರ ಕೋರಿಕೆಯ ಮೇರೆಗೆ ಛಾಯಚಿತ್ರವನ್ನು ತೆಗೆಸಿಕೊಂಡಿರುತ್ತೇನೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

19. ಈ ಪ್ರಕರಣದಲ್ಲಿ ಅಭಿಯೋಜನೆಯು ಹಾಜರುಪಡಿಸಿರುವ ಎಲ್ಲಾ ಮೌಖಿಕ ಹಾಗೂ ದಾಖಲಾತಿ ದಾಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಸಾ-1 ರವರು ಈ ಪ್ರಕರಣದಲ್ಲಿ ಪಿರ್ಯಾದುದಾರರು ಆಗಿದ್ದು, ತಮ್ಮ ಮುಖ್ಯ

ವಿಚಾರಣೆಯಲ್ಲಿ ಸುಮಾರು 4-5 ವರ್ಷಗಳ ಹಿಂದೆ ತಾನು ತರೀಕೆರೆಯಿಂದ ಲಿಂಗದಹಳ್ಳಿ ಗ್ರಾಮಕ್ಕೆ ಸಂಜೆ 08.30 ಗಂಟೆ ಸಮಯದಲ್ಲಿ ತನ್ನ ಬೈಕಿನಲ್ಲಿ ಹೋಗುತ್ತಿದ್ದಾಗ ಕೆಂಚಾಪುರದ ಸ್ವಲ್ಪ ದೂರದಲ್ಲಿ ಶಿವು ಎಂಬುವವರು ಅವರ ಬೈಕಿನಲ್ಲಿ ಕೆಳಗೆ ಬಿದ್ದಿದ್ದರು, ಅಪಘಾತವನ್ನು ತಾನು ಕಣ್ಣಾರೆ ನೋಡಿರುವುದಿಲ್ಲ, ತಾನು ಹೋಗಿ ಶಿವುರವರನ್ನು ತರೀಕೆರೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ವೈದ್ಯರು ಪರಿಶೀಲಿಸಿ ಶಿವುರವರು ಮೃತಪಟ್ಟಿರುತ್ತಾರೆಂದು ತಿಳಿಸಿದರು, ಅಪಘಾತ ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿಯವರ ಸಾಕ್ಷ್ಯವನ್ನು ಗಮನಿಸಿದಾಗ ಸದರಿಯವರು ಘಟನೆಯನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದು ಕಂಡುಬರುತ್ತದೆ. ಆದ್ದರಿಂದ ಸದರಿಯವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಪ್ರಯೋಜನಕರ ಸಾಕ್ಷ್ಯವಾಗಿರುವುದಿಲ್ಲ.

20. ಅಸಾ-8 ರವರು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಘಟನೆಯನ್ನು ತಾನು ಕಣ್ಣಾರೆ ಕಂಡಿರುವುದಿಲ್ಲ, ಆನಂತರ ವಿಚಾರ ತಿಳಿದುಬಂದಿರುತ್ತದೆ ಎಂದು ನುಡಿದಿದ್ದು, ಅಭಿಯೋಜಕರು ಸದರಿ ಸಾಕ್ಷಿದಾರರಾನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾಡಿದ ಪಾಟೀ ಸವಾಲಿನಲ್ಲಿ ದಿನಾಂಕ 11.02.2020 ರಂದು ತಾನು ಕೆಂಚಾಪುರಕ್ಕೆ ಹೋಗಲು ಬಸ್ ನಿಲ್ದಾಣದಲ್ಲಿ ಕಾಯುತ್ತಿದ್ದು, ಬಸ್ಸು ಬರದೇ ಇರುವ ಕಾರಣ ತಾನು ಲಾರಿಯನ್ನು ಹತ್ತಿರುತ್ತೇನೆಂದರೆ ಸರಿ, ಲಾರಿಯ ಚಾಲಕ ಅಮೃತ್ ಮಹಲ್ ನ ಹತ್ತಿರ ಲಾರಿ ನಂ.ಕೆಎ:52/7841 ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ರಂಗಪ್ಪನವರ ಫಾರಂ ಹತ್ತಿರ ಹೋಗುತ್ತಿರುವಾಗ ಕೆಎ:66/ಜೆ-5713 ರ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಬೈಕ್ ಚಾಲಕ ಬೈಕಿನಿಂದ ಕೆಳಗೆ ಬಿದ್ದು ತಲೆಗೆ, ಮೈಕೈಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿರುತ್ತಾರೆಂದರೆ ಸರಿ, ಲಾರಿ ಚಾಲಕ ಲಾರಿಯನ್ನು ನಿಲ್ಲಿಸು ಎಂದು ಹೇಳಿದರೂ ನಿಲ್ಲಿಸಲಿಲ್ಲ ಎಂದರೆ ಸರಿ, ಸದರಿ ವಿಚಾರವಾಗಿ ಪೊಲೀಸರ ಮುಂದೆ ಹೇಳಿಕೆ

ನೀಡಿರುತ್ತೇನೆಂದರೆ ಸರಿ ಎಂದು ನುಡಿದಿದ್ದು, ನಂತರ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಅಪಘಾತ ಹೇಗೆ ಆಯಿತು ಎಂದು ತನಗೆ ತಿಳಿದಿರುವುದಿಲ್ಲ, ಅಪಘಾತವನ್ನು ತಾನು ತನ್ನ ಕಣ್ಣಾರೆ ಕಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಯವರ ಸಾಕ್ಷವನ್ನು ಗಮನಿಸಿದಾಗ ಸದರಿಯವರ ಮುಖ್ಯ ವಿಚಾರಣೆ ಅಂಶಗಳು ಹಾಗೂ ಅಭಿಯೋಜಕರು ಮಾಡಿದ ಪಾಟೀ ಸವಾಲಿನ ಅಂಶಗಳಿಗೂ ಒಂದಕ್ಕೊಂದು ತಾಳೆಯಾಗುವುದಿಲ್ಲ ಹಾಗೂ ಅನೇಕ ದ್ವಂದ್ವತೆಗಳಿಂದ ಕೂಡಿರುತ್ತದೆ, ಸದರಿಯವರು ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ತಾನು ಅಪಘಾತವನ್ನು ಕಣ್ಣಾರೆ ಕಂಡಿರುವುದಿಲ್ಲ ಎಂದು ನುಡಿದಿರುವುದನ್ನು ಗಮನಿಸಿದಾಗ ಸದರಿಯವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿರುವುದಿಲ್ಲ ಮತ್ತು ನಂಬಲು ಅರ್ಹವಾಗಿರುವುದಿಲ್ಲ. ಆದ್ದರಿಂದ ಅಸಾ-1 ಮತ್ತು 8 ರವರ ಸಾಕ್ಷ್ಯದಿಂದ ಮೇಲ್ಕಂಡ ಅಪಘಾತವು ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯಿಂದ ನಡೆದಿರುತ್ತದೆ ಎಂದು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ.

21. ಅಸಾ-2 ಮತ್ತು 9 ರವರು ನಿಪಿ-2 ರ ಸ್ಥಳ ಮಹಜರು ಹಾಗೂ ನಿಪಿ-3 ರ ಬೈಕು/ವಾಹನ ಅಮಾನತ್ತು ಮಹಜರು ಸಾಕ್ಷಿದಾರರಾಗಿದ್ದು, ಅಸಾ-2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ನಾಲ್ಕು ವರ್ಷಗಳ ಹಿಂದೆ ತಾನು ಕೆಂಚಾಪುರದ ಹತ್ತಿರ 11.00 ಗಂಟೆ ಸಮಯದಲ್ಲಿ ರಸ್ತೆಯಲ್ಲಿ ಬರುತ್ತಿರುವಾಗ ಅಪಘಾತದ ವಿಚಾರವಾಗಿ ಪೊಲೀಸರ ಕೋರಿಕೆಯ ಮೇರೆಗೆ ನಿಪಿ-3 ದಾಖಲಾತಿಗೆ ತಾನು ಕೆಂಚಾಪುರದಲ್ಲಿ ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿರುವುದಿಲ್ಲ, ತನ್ನ ಸಮಕ್ಷಮದಲ್ಲಿ ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-9 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ಮಧ್ಯಾಹ್ನ 12.00 ಗಂಟೆ

ಸಮಯದಲ್ಲಿ ಕೆಂಚಾಪುರದ ಗೇಟ್ ಹತ್ತಿರ ಅಪಘಾತದ ವಿಚಾರವಾಗಿ ಪೊಲೀಸರು ಮಾಡಿದ ಮಹಜರಿಗೆ ತಾನು ಸಹಿ ಮಾಡಿದ್ದು, ಮಹಜರಿನಲ್ಲಿ ಬರೆದಿರುವ ವಿಚಾರ ತನಗೆ ತಿಳಿದಿರುತ್ತದೆ, ಲಿಂಗದಹಳ್ಳಿ ಪೊಲೀಸ್ ಠಾಣಾ ಆವರಣದಲ್ಲಿ ಇನ್ನೊಂದು ವಾಹನ ಅಮಾನತ್ತು ಮಹಜರಿಗೆ ಸಹಿ ಮಾಡಿರುತ್ತೇನೆ, ತನ್ನ ಸಮಕ್ಷಮ ಟಿ.ವಿ.ಎಸ್. ಬೈಕ್ ನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿದಿದ್ದು, ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಮಹಜರಿಗೆ ಸಹಿ ಮಾಡಿರುತ್ತೇನೆ, ಅದರಲ್ಲಿ ಬರೆದ ವಿಚಾರ ತನಗೆ ತಿಳಿದಿರುವುದಿಲ್ಲ, ಪೊಲೀಸರ ಕೋರಿಕೆಯ ಮೇರೆಗೆ ಛಾಯಚಿತ್ರವನ್ನು ತೆಗೆಸಿಕೊಂಡಿರುತ್ತೇನೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಅಸಾ-9 ರವರ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನ ಅಂಶಗಳನ್ನು ಗಮನಿಸಿದಾಗ ಸದರಿಯವರ ಸಾಕ್ಷ್ಯವು ಅನೇಕ ದ್ವಂದ್ವತೆಗಳಿಂದ ಕೂಡಿದ್ದು ಅವರ ಸಾಕ್ಷ್ಯದ ಬಗ್ಗೆ ಸಂಶಯವುಂಟಾಗುತ್ತದೆ. ಅಸಾ-2 ರವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಸಾ-2 ಮತ್ತು 9 ರವರ ಸಾಕ್ಷ್ಯವನ್ನು ಗಮನಿಸಿದಾಗ ಒಂದಕ್ಕೊಂದು ತಾಳೆಯಾಗುತ್ತಿರುವುದಿಲ್ಲ. ಸದರಿ ಸಾಕ್ಷಿದಾರರು ನಿಪಿ-2 ಮತ್ತು 3 ರ ಮಹಜರಿಗೆ ಸಹಿ ಹಾಕಿದ ಸಾಕ್ಷಿದಾರರಾಗಿದ್ದು ಅಪಘಾತ ಹೇಗಾಯಿತು ಎಂಬುದು ಈ ಸಾಕ್ಷಿದಾರರಿಗೆ ತಿಳಿದಿರುವುದಿಲ್ಲ. ನಿಪಿ-10 ರ ವಾಹನ ಅಮಾನತ್ತು ಮಹಜರು ಸಾಕ್ಷಿದಾರರಾದ ಅಸಾ-3 ಮತ್ತು 7 ರವರು ತಮ್ಮ ಸಾಕ್ಷ್ಯದಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತಮಗೆ ತಿಳಿದಿರುವುದಿಲ್ಲ ಹಾಗೂ ತನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ನಿಪಿ-10 ರ ಮಹಜರಿಗೆ ಸಹಿ ಹಾಕಿದ ಸಾಕ್ಷಿದಾರರಾಗಿದ್ದು ಅಪಘಾತ ಹೇಗಾಯಿತು ಎಂಬುದು ಈ ಸಾಕ್ಷಿದಾರರಿಗೆ ತಿಳಿದಿರುವುದಿಲ್ಲ. ಆದ್ದರಿಂದ ಸದರಿ

ಸಾಕ್ಷಿದಾರರು ಮೇಲ್ಕಂಡ ಅಪಘಾತವನ್ನು ರುಜುವಾತು ಪಡಿಸುವಲ್ಲಿ ಈ ಪ್ರಕರಣಕ್ಕೆ ಅಷ್ಟೊಂದು ಮಹತ್ವದ ಸಾಕ್ಷಿದಾರರು ಆಗಿರುವುದಿಲ್ಲ.

22. ಅಸಾ-4 ರವರು ವಾಹನ ನಿರೀಕ್ಷಕರಾಗಿದ್ದು ಅಪಘಾತಕ್ಕೀಡಾದ ವಾಹನಗಳನ್ನು ಪರಿಶೀಲಿಸಿ ನಿಪಿ-12 ಮತ್ತು 13 ರಂತೆ ವರದಿಗಳನ್ನು ನೀಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಅಸಾ-5 ರವರು ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ ಬಗ್ಗೆ ಹಾಗೂ ಅಸಾ-6 ಈ ಪ್ರಕರಣದಲ್ಲಿ ತನಿಖೆಯನ್ನು ಕೈಗೊಂಡು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಮೇಲ್ಕಂಡಂತೆ ಚರ್ಚಿಸಿದ ಕಾರಣಗಳಿಂದಾಗ ಈ ಪ್ರಕರಣದಲ್ಲಿ ಆರೋಪಿಸಿದಂತೆ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯಿಂದ ಸದರಿ ಅಪಘಾತವಾಗಿರುತ್ತದೆ ಎಂಬುದರ ಬಗ್ಗೆ ತೀರ್ಮಾನಕ್ಕೆ ಬರಲಾಗುವುದಿಲ್ಲ. ಅಭಿಯೋಜನೆಯು ಹಾಜರುಪಡಿಸಿರುವ ಎಲ್ಲಾ ಮೌಖಿಕ ಹಾಗೂ ದಾಖಲಾತಿ ದಸ್ತಾವೇಜು ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಭಿಯೋಜನೆಯು ಭಾರತೀಯ ದಂಡ ಸಂಹಿತೆ ಕಲಂ 279 ರ ಘಟಕಾಂಶಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸಿರುವುದಿಲ್ಲ. ಭಾರತೀಯ ದಂಡ ಸಂಹಿತೆ ಕಲಂ 279 ರ ಘಟಕಾಂಶಗಳನ್ನು ಅಭಿಯೋಜನೆಯು ರುಜುವಾತು ಪಡಿಸದಿದ್ದಲ್ಲಿ ಭಾರತೀಯ ದಂಡ ಸಂಹಿತೆ ಕಲಂ 304(ಎ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 187 ರ ಘಟಕಾಂಶಗಳು ಅನ್ವಯವಾಗುವುದಿಲ್ಲ.

23. ಈ ಮೇಲ್ಕಂಡ ಎಲ್ಲಾ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಭಿಯೋಜನೆಯು ಆರೋಪಿಯ ವಿರುದ್ಧ ಆರೋಪಿಸಿದ ಭಾರತೀಯ ದಂಡ ಸಂಹಿತೆ ಕಲಂ ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿನ ಒಳಾಂಶಗಳನ್ನು ನಿಸ್ಸಂಶಯತೀತವಾಗಿ ಸಾಬೀತುಪಡಿಸಲು ವಿಫಲವಾಗಿರುತ್ತಾರೆ. ಆದ್ದರಿಂದ ಸಂಶಯದ

ಲಾಭವನ್ನು ಆರೋಪಿಗೆ ನೀಡಿ ಆರೋಪಿಯು ಬಿಡುಗಡೆಗೆ ಅರ್ಹರೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು, ಅಂಶ-1 ರಿಂದ 3 ನ್ನು ನಕಾರಾತ್ಮಕ ಎಂದು ಉತ್ತರಿಸಿರುತ್ತೇನೆ.

24. <u>ಅಂಶ - **4** ಃ</u> ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ ಃ

-ಃ <u>ಆದೇಶ</u> ಃ-

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ) ಮತ್ತು ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿನ ಆರೋಪಗಳಿಂದ ದೋಷಮುಕ್ತಗೊಳಿಸಲಾಗಿದೆ.

ಆರೋಪಿಯ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ರದ್ದುಗೊಳಿಸಲಾಗಿದೆ.

ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಸಲ್ಲಿಸಿದ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ಆರು ತಿಂಗಳವರೆಗೆ ಊರ್ಜಿತವಾಗಿರುತ್ತದೆ.

ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಮುದ್ದೆಮಾಲು-1 ಬೆಲೆ ಬಾಳದ ವಸ್ತುವಾದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸುವಂತೆ ಈ ಮೂಲಕ ಕಛೇರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು

ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 7 ನೇ ಏಪ್ರಿಲ್ 2026 ರಂದು ಘೋಷಿಸಲಾಯಿತು)

URMILA V

Digitally signed by URMILA V
Date: 2026.04.07 15:30:07 +0530

ಸಹಿ
**(ಉರ್ಮಿಳ.ವಿ.)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

## ಅನುಬಂಧ

ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-

| | | |
|---|---|---|
| ಅಸಾ-1 | ಃ | ಕುಮಾರ |
| ಅಸಾ-2 | ಃ | ರುದ್ರೇಶ್ |
| ಅಸಾ-3 | ಃ | ದೂದ್ಯನಾಯ್ಕ |
| ಅಸಾ-4 | ಃ | ಎನ್.ಈಶ್ವರ್ |
| ಅಸಾ-5 | ಃ | ಸುಂದರೇಶ್ |
| ಅಸಾ-6 | ಃ | ಕೆ.ಎಂ.ಯೋಗೇಶ್ |
| ಅಸಾ-7 | ಃ | ರೇಖ್ಯಾನಾಯ್ಕ |
| ಅಸಾ-8 | ಃ | ತಿಮ್ಮಪ್ಪ |
| ಅಸಾ-9 | ಃ | ನಾಗರಾಜ |

ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-

| | | |
|---|---|---|
| ನಿಪಿ-1 | ಃ | ದೂರು |
| ನಿಪಿ-2 | ಃ | ಸ್ಥಳ ಮಹಜರು |
| ನಿಪಿ-3 | ಃ | ಅಮಾನತ್ತು ಮಹಜರು |
| ನಿಪಿ-4, 5 | ಃ | ಛಾಯಚಿತ್ರಗಳು |
| ನಿಪಿ-6 | ಃ | ಶವ ತನಿಖಾ ವರದಿ |
| ನಿಪಿ-7 | ಃ | ಸಾಕ್ಷಿದಾರರ ಹೇಳಿಕೆಗಳು |
| ನಿಪಿ-8 | ಃ | ಛಾಯಚಿತ್ರ |
| ನಿಪಿ-9 | ಃ | ಶವ ಪರೀಕ್ಷಾ ವರದಿ |
| ನಿಪಿ-10 | ಃ | ಅಮಾನತ್ತು ಮಹಜರು |
| ನಿಪಿ-11 | ಃ | ಛಾಯಚಿತ್ರ |
| ನಿಪಿ-12, 13 | ಃ | ಮೋಟಾರು ವಾಹನ ಅಪಘಾತ ತಪಾಸಣಾ ವರದಿ |

Visit **ecourts.gov.in** for updates or download mobile app "**eCourts Services**" from Android or iOS

KACM710004772021

ನಿಪಿ-14 ಃ ಪ್ರಥಮ ವರ್ತಮಾನ ವರದಿ
ನಿಪಿ-15 ಃ ಐಎಂವಿ ಕಾಯ್ದೆ ಕಲಂ 133 ರೀತ್ಯಾ ನೋಟೀಸ್
ನಿಪಿ-16 ಃ ದೃಢೀಕರಣ ಪತ್ರ
ನಿಪಿ-17 ಃ ಗಿರೀಜಾಬಾಯಿಯವರ ಹೇಳಿಕೆ
ನಿಪಿ-18 ಃ ರೇಖ್ಯಾನಾಯ್ಕರವರ ಹೇಳಿಕೆ
ನಿಪಿ-19 ರಿಂದ 21ಃ ಪಂಚರಿಗೆ ನೀಡಿದ ನೋಟೀಸ್ ಗಳು

ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ಮುದ್ದೆಮಾಲುಗಳು ಃ-

ಮುದ್ದೆಮಾಲು-1ಃ ಗಾಜಿನ ಚೂರುಗಳು

ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-

- ಇಲ್ಲ -

ಆರೋಪಿ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-

- ಇಲ್ಲ -

URMILA V
Digitally signed by URMILA V
Date: 2026.04.07 15:29:58 +0530

ಸಹಿ
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

Visit **ecourts.gov.in** for updates or download mobile app “**eCourts Services**” from Android or iOS